ಶ್ರೀ ಎಂ. ವಿ. ಕೃಷ್ಣಪ್ಪ.—ನಂಬಳದ ಬಿಲ್‌ಗಳನ್ನೂ ಡಿಸ್ಟ್ರಿಕ್ಟ್ ಸರ್ವೆ ಆಫೀಸರ್ ಮಟ್ಟದಲ್ಲಿ ಡ್ರಾ ಮಾಡುತ್ತಾರೆ.

ಶ್ರೀ ಬಿ. ಹುಚ್ಚೇಗೌಡ.—ಡಿಸ್ಟ್ರಿಕ್ಟ್ ಸರ್ವೆ ಅಫೀಸರ ಕೈಕೆಳಗೆ ಅವರು ಕೆಲಸ ಮಾಡುವುದರಿಂದ ತಾಲ್ಲೂಕ್ ತಹಸೀಲ್ದಾರರು ಕೇಳಿದರೆ ಅವರ ಮಾತು ನಡೆಯುವಿದಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಜಿಲ್ಲಾ ಮಟ್ಟದಲ್ಲಿ ಸರ್ವೆ ಅಫೀಸರ್ ಇರುವುದೇ ಈ ಉದ್ದೇಶಕ್ಕಾಗಿ, ಅವರು ಎಲ್ಲ ಕಡೆಯೂ ಓಡಾಡುತ್ತಾರೆ.

Sri K. LAKKAPPA.—Sir, may I know whether these surveyors are technical people or non-technical ?

Sri M. V. KRISHNAPPA.—Survey work is technical work, Sir.

Private Hostels in Tumkur District

*Q.—78. Sri ANDANAIAH (Kunigal).—

Will the Government be pleased to state :—

(*a*) the number of private Hostels in Tumkur District;

(*b*) the names of Hostels for which they have granted lands ;

(*c*) out of the lands granted to these Hostels the extent of wet land and the extent of dry land granted ;

(*d*) the number of students who have been provided with boarding and lodging facilities in the above Hostels ;

(*e*) the annual income derived from the wet and dry lands granted to the Hostels ;

(*f*) the names of Hostels to which they have granted licence for running buses and the annual income derived out of it by these Hostels?

A.—Sri S. R. KANTHI (Minister for Education).—

(*a*) 28.

(*b*) 1. Shri Sarvodaya Hostel, Nonavinakere, Tiptur Taluk.

2. Vokkaligara Hostel, Kunigal.

3. Nagavalli High School Hostel, Nagavalli, Tumkur Taluk.

(*c*)—

Sl.No.	*Name of the Hostel*	*Wet land.*	*Dry land.*
1.	Shri Sarvodaya Hostel at Nonavinakere.	...	6 acres 38 guntas.
2.	Vokkaligara Hostel, Kunigal.	6 acres	...
3.	Nagavalli High School Hostel, Nagavalli.	7 acres 27 guntas.	20 acres

(SRI S. R. KANTHI)

(*d*)—

Sl.No.	*Name of the Hostel*	*Strength*
1	Shri Sarvodaya Hostel, Nonavinakere.	28 students
2.	Vokkaligara Hostel, Kunigal ...	30 do
3.	Nagavalli High School Hostel ...	40 do

(*e*)—

Sl.No.	*Name of the Hostel*	*Annual income in Rupees*
1.	Shri Sarvodaya Hostel ...	The land has been leased out on 22-1-1962 and probable income would be Rs. 350
	2. Vokkaligara Hostel ...	Rs. 1,000
	3. Nagavalli Hostel ...	Rs. 1,368

(*f*)—

Sl.No.	*Name of the Hostel*	*Annual income Rs.*
1.	Nagavalli High School Hostel Service :—	
	(i) Tumkur to Bangalore (ii) Tumkur to Maddur	1,200 p.a.
2.	Shri Ganapathi High School Hostel Service.	
	(i) Kebbur to Y. N. Hosakote.	1,200 p.a.

ಶ್ರೀ ಅಂದಾನಯ್ಯ.—ನಾಗವಳ್ಳಿ ಹೈಸ್ಕೂಲ್ ಹಾಸ್ಟಲು ಯಾರ ಅಧೀನಕ್ಕೆ ಒಳಪಟ್ಟಿದೆ? ಅದರ ಮ್ಯಾನೇಜ್‌ಮೆಂಟನ್ನು ಯಾರು ನೋಡುತ್ತಿದ್ದಾರೆ?

† ಶ್ರೀ ಎಸ್. ಆರ್ ಕಂಠಿ.—ವ್ಯಕ್ತಿ ಯಾರು ಎನ್ನುವುದು ಅಷ್ಟು ಅವಶ್ಯವೆಂದು ಕಾಣುವುದಿಲ್ಲ.

Sri G. V. GOWDA.—Which is the management that runs the hostel?

ಶ್ರೀ ಎಸ್. ಆರ್ ಕಂಠಿ.—ಮ್ಯಾನೇಜ್‌ಮೆಂಟ್ ಹೆಸರು ನನ್ನ ಹತ್ತಿರವಿಲ್ಲ.

ಶ್ರೀ ವಿ. ಎಂ. ದೇವ್.—ತುಮಕೂರು ಮದ್ದೂರು ಬಸ್ ಮಾರ್ಗದ ಮಾಲೀಕರಲ್ಲವೆ ಸ್ವಾಮಿ?

ಶ್ರೀ ಎಸ್. ಆರ್. ಕಂಠಿ.—ಮಾನ್ಯ ಸದಸ್ಯರು ಸೂಚನೆ ಮಾಡುತ್ತಿದ್ದಾರೆ, ನೋಡುತ್ತೇನೆ.

Sri G. V. GOWDA.—Out of the 28 private Hostels, may I know how many are receiving boarding grant from the Education Department?

Sri S. R. KANTHI.—That information is not available with me, Sir.

Sri G. V. GOWDA.—These three hostels—are they being paid boarding grant?

Sri S. R. KANTHI.—No, Sir.

ಶ್ರೀ ಸಿ. ಆರ್. ರಂಗೇಗೌಡ.—ನಾಗವಳ್ಳಿ ಹೈಸ್ಕೂಲ್ ಹಾಸ್ಟಲಿಗೆ 7 ಎಕರೆ-27 ಗುಂಟೆ ತರಿ ಮತ್ತು 20 ಎಕರೆ ಖುಷ್ಕಿ ಜಮೀನು ಇದೆ. ಆ ಜಮೀನನ್ನು ಯಾರು ಸಾಗುವಳಿ ಮಾಡುತ್ತಿದ್ದಾರೆ? ಆ ಜಮೀನನ್ನು ನೋಡಿಕೊಳ್ಳುವವರು ಯಾರು?

† Indicates that the remarks or speeches have not been revised by the member concerned.

ಶ್ರೀ ಎಸ್. ಆರ್. ಕಂಠಿ.—ಹಾಸ್ಟಲಗೆ ಕೊಟ್ಟಿದೆ. ಹಾಸ್ಟಲಿನ ಪರವಾಗಿ ಅದನ್ನು ನಡೆಸುವಂಥ managing body ನೋಡಿಕೊಳ್ಳುತ್ತಾರೆ.

ಶ್ರೀ ಪಿ. ಎಂ. ದೇವ್.—1200ರೂಪಾಯಿ ವಾರ್ಷಿಕ ಉತ್ಪತ್ತಿ ಬಸ್‌ಮಾರ್ಗದಿಂದ ಬರುತ್ತದೆ ಎಂದು ಹೇಳಿದ್ದೀರಿ. ಈ ಬಸ್ ಮಾರ್ಗವನ್ನು ಹಾಸ್ಟಲ್‌ನವರು ನಡೆಸದೆ ಇನ್ನೊಬ್ಬರಿಗೆ ಕೊಡುತ್ತಿದ್ದಾರೆ. ಈ ವಿಚಾರ ಸರ್ಕಾರಕ್ಕೆ ಗೊತ್ತಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಯಾರಿಗೆ ಬಸ್‌ಲೈನ್ ಕೊಟ್ಟಿರುತ್ತೇವೆಯೋ ಅವರೇ ನಡೆಸಬೇಕೆಂದಿರುತ್ತದೆ. ಮಾನ್ಯ ಸದಸ್ಯರು ಹೇಳುವ ಪ್ರಕಾರ ಬೇರೆಯವರು ನಡೆಸುತ್ತಿದ್ದರೆ ಅದನ್ನು ನೋಡಿಸುತ್ತೇನೆ.

ಶ್ರೀ ಕೆ. ಲಕ್ಕಪ್ಪ.—ಗಣಪತಿ ಹೈಸ್ಕೂಲ್ ಹಾಸ್ಟಲ್, ನರ್ಪಿಸ್ ಎಂದು ಹೇಳಿದ್ದೀರಿ. ಈ ಹಾಸ್ಟಲ್ ಎಲ್ಲದೆ, ಇಲ್ಲಿ ಎಷ್ಟುಜನ ವಿದ್ಯಾರ್ಥಿಗಳಿದ್ದಾರೆ ?

ಶ್ರೀ ಎಸ್. ಆರ್. ಕಂಠಿ.—ಕೆಬ್ಬೂರಿನಲ್ಲಿದೆ. ಎಷ್ಟುಜನ ವಿದ್ಯಾರ್ಥಿಗಳಿದ್ದಾರೆನ್ನುವ ಮಾಹಿ ನನ್ನಲ್ಲಿಲ್ಲ.

ಶ್ರೀ ಎಕ್. ಹುಚ್ಚಮಾಸ್ತಿ ಗೌಡ.—ಈ ಹಾಸ್ಟಲುಗಳಿಗೆ ಜಮೀನಾಗಲೀ, ಬಸ್ ಲೈನ್ ಆಗಲಿ, ಯಾವುದಾದರೂ ಉತ್ಪತ್ತಿ ಬರತಕ್ಕ ವ್ಯವಸ್ಥೆಯನ್ನು ಸರ್ಕಾರದವರು ಮಾಡಿದಮೇಲೆ ಅದರ ವಿನಿಯೋಗ ಸರಿಯಾಗಿ ಆಗುತ್ತಿಹೆಯೇ, ಇಲ್ಲವೇ ಎನ್ನುವುದನ್ನು ಮೇಲ್ವಿಚಾರಣೆ ಮಾಡತಕ್ಕ ವ್ಯವಸ್ಥೆ ಏನಾದರೂ ಸರ್ಕಾರದಲ್ಲಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಆ ಕೆಲಸವನ್ನು D. E. O. ಮಾಡುತ್ತಿದ್ದಾರೆ.

ಶ್ರೀ ಸಿ. ಆರ್. ರಂಗೇಗೌಡ.—ನಾಗವಳ್ಳಿ ಹೈಸ್ಕೂಲು ಮ್ಯಾನೇಜಿಂಗ್ ಕಮಿಟಿಯನ್ನು ಯಾವಾಗ ಮಾಡಿದಿರಿ ? ಅದರ ಸದಸ್ಯರು ಯಾರು ?

ಶ್ರೀ ಎಸ್. ಆರ್. ಕಂಠಿ.—ಆ ಸಮಾಚಾರ ನನ್ನಲ್ಲಿಲ್ಲ. ಪ್ರತ್ಯೇಕವಾಗಿ ಕೇಳಿದರೆ ತರಿಸುತ್ತೇನೆ.

ಶ್ರೀ ಪಿ. ಎಂ. ದೇವ್.—ನಾಗವಳ್ಳಿ ಹಾಸ್ಟಲಿಗೆ ಜಮೀನಿಂದ ಬರುತ್ತದೆಂದು ತೋರಿಸಿರುವ ವರ ಮಾನವನ್ನು ನೋಡಿದರೆ ಏನೋ ಅಕ್ರಮ ನಡೆದಿದೆಯೆಂದು ತೋರುತ್ತದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎಸ್. ಆರ್. ಕಂಠಿ.—7 ಎಕರೆ–27ಗುಂಟೆ wet land ಮತ್ತು 20 ಎಕರೆ dry land ನಿಂದ ಬರುವ ಉತ್ಪತ್ತಿ 1,368 ರೂಪಾಯಿಗಳಿಗಿಂತ ಜಾಸ್ತಿ ಬರುತ್ತದೆ ಎಂದು ಹೇಳುತ್ತಾರೆಂದು ಕಾಣುತ್ತದೆ. ಅದನ್ನು ನೋಡಿಸುತ್ತೇನೆ.

ಶ್ರೀ ಜಿ. ವಿ. ಗೌಡ.—ಇಲ್ಲಿ ಎರಡು ಬಸ್ ಸರ್ವಿಸ್‌ನ ವಿವರಗಳಿವೆ. ಒಂದು ನಾಗವಲ್ಲಿ ಪ್ರೌಢಶಾಲಾ ವಿದ್ಯಾರ್ಥಿನಿಲಯದ್ದು ಇನ್ನೊಂದು ಶ್ರೀ ಗಣಪತಿ ಪ್ರೌಢಶಾಲಾ ವಿದ್ಯಾರ್ಥಿ ನಿಲಯದ್ದು. ಇವು ಎಷ್ಟು ಮೈಲಿ ದೂರ ಓಡುತ್ತಿವೆ ?

ಶ್ರೀ ಎಸ್. ಆರ್. ಕಂಠಿ.—ಉತ್ತರದಲ್ಲೇ ಎಲ್ಲೆಲ್ಲಿಗೆ ಹೋಗುತ್ತವೆ ಎಂದಿದೆ. ಒಂದು ಬನ್ನು ತುಮಕೂರಿನಿಂದ ಬೆಂಗಳೂರಿಗೆ. ಮತ್ತೊಂದು ತುಮಕೂರಿನಿಂದ ಮದ್ದೂರಿಗೆ, ಮತ್ತೊಂದು ಹೆಬ್ಬೂರಿನಿಂದ ಮೈ. ಎನ್. ಹೊಸಕೋಟೆಗೆ ಎಂದು ಇದೆ. ಇದರ ಡಿಸ್ಟೆನ್ಸನ್ನು ಇಲ್ಲಿ ಹಾಕಲಿಲ್ಲ.

ಶ್ರೀ ಜಿ. ವಿ. ಗೌಡ.—ಎಷ್ಟು ದೂರ ಈಗ ಓಡುತ್ತೆ ಎನ್ನುವುದನ್ನು ನೋಡಿದರೆ ತಿಂಗಳಿಗೆ 50 ಅಥವಾ 100 ರಂತೆ ವರ್ಕೌಟ್ ಆಗುತ್ತದೆ.

ಶ್ರೀ ಎಸ್. ಆರ್. ಕಂಠಿ.—ತಾವು ಹೇಳುವ ಪ್ರಶ್ನೆಯಿಂದ ಇನ್‌ಕಂ ಇನ್ನೂ ಜಾಸ್ತಿ ಇದೆ, ಇಲ್ಲಿ ಕಮ್ಮಿ ಎಂದು ಏಕೆ ಹೇಳುತ್ತೀರಿ ಎಂದು ಇದು ಸ್ಪಷ್ಟವಾಗಿಲ್ಲ. ಇದರ ವಿವರದ ಬಗ್ಗೆ ನೋಡಿಸುತ್ತೇವೆ. ಅಲ್ಲದೆ ಒಂದು ವರ್ಷದಲ್ಲಿ 1,000 ಬರುತ್ತದೆ. ಇನ್ನೊಂದು ಕಡೆ 1,200 ಬರುತ್ತೆ ಇದರ ಅರ್ಥವೇನು ಎನ್ನುವುದನ್ನು ನೋಡಿಸಿ ಹೇಳುತ್ತೇನೆ.

ಶ್ರೀ ಬಿ. ಕೆ. ಪುಟ್ಟಯ್ಯ.—ಉತ್ತರದಲ್ಲಿ ಹೇಳಿರುವಂತೆ ನೋಡಿದರೆ ಒಂದು ಹಾಸ್ಟಲ್ಲಿಗೆ 6 ಎಕರೆ 38 ಗುಂಟೆ dry land ಇದೆ. ಒಂದು ಹಾಸ್ಟಲಿಗೆ 6 ಎಕರೆಗಳಷ್ಟು wet land ಇದೆ ಇನ್ನೊಂದಕ್ಕೆ 7 ಎಕರೆ 27 ಗುಂಟೆಗಳಷ್ಟು wet land ಮತ್ತು 20 ಎಕರೆಗಳಷ್ಟು dry land ಅನ್ನು ಕೊಟ್ಟಿದ್ದೀರಿ. ಹೀಗೇಕೆ ವ್ಯತ್ಯಾಸ ಮಾಡಿದ್ದೀರಿ ?

ಶ್ರೀ ಎಸ್. ಆರ್. ಕಂಠಿ.—ಎಷ್ಟು ಕೊಡಲಕ್ಕೆ ಸಾಧ್ಯವಿತ್ತೋ ಅಷ್ಟನ್ನು ಕೊಡಲಾಗಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇಷ್ಟು ದೂರ ಬಸ್ಸುಗಳು ಓಡಾಡುತ್ತಿರುವ ರಸ್ತೆಯಲ್ಲಿ ಜನರ ಒತ್ತಡವೇನು ಎನ್ನುವುದನ್ನು ನೋಡಿಕೊಂಡು ಇಲ್ಲಿರುವ ಉತ್ಪತ್ತಿಯನ್ನು ಕೊಡಲಾಗಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಸರ್ಕಾರ ವಾರ್ಷಿಕ ಇನ್‌ಕಂ ಒಂದು ಸಾವಿರ ರೂಪಾಯಿ ಎಂದು ಹೇಳಿದೆ, ಆದರೆ ಪೂರ್ಣ ವಿವರಗಳು ಇಲ್ಲಿ ಇಲ್ಲ.

ಶ್ರೀ ಅಂದಾನಯ್ಯ.—ಹಾಸ್ಟಲುಗಳಲ್ಲಿರುವ ಸಂಖ್ಯೆಯಂತೆ ಒಂದು ಹಾಸ್ಟಲಿನಲ್ಲಿ 28 ಜನ, ಒಂದರಲ್ಲಿ 40 ಜನ, ಇನ್ನೊಂದರಲ್ಲಿ 40 ಜನ ಎಂದಿದೆ. ಇವರಲ್ಲಿ ಎಷ್ಟು ಜನರಿಗೆ ಉಚಿತವಾಗಿ ಅನ್ನ ಹಾಕುತ್ತಿದ್ದಾರೆ ಮತ್ತು ಎಷ್ಟು ಜನರಿಂದ ದುಡ್ಡು ತೆಗೆದುಕೊಳ್ಳುತ್ತಿದ್ದಾರೆ?

ಶ್ರೀ ಎಸ್. ಆರ್. ಕಂಠಿ.—ನನಗೆ ತಿಳಿದಮಟ್ಟಿಗೆ ಎಲ್ಲರಿಗೂ ಉಚಿತವೆಂದು ತೋರುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಯಾವ ಯಾವ ಹಾಸ್ಟಲುಗಳಲ್ಲಿ ಬರುವ ಉತ್ಪತ್ತಿಯನ್ನು ತನಿಖೆ ಮಾಡಲು ಡಿ. ಇ. ಓ. ಇದ್ದಾರೆಂದು ಹೇಳಿದಿರಿ. ಆದರೆ ತಮಗೇನಾದರೂ ಸರಕಾರ ಕೊಟ್ಟ ಹಣ ಇಲ್ಲಿ ಸರಿಯಾಗಿ ವಿನಿಯೋಗವಾಗಿದೆಯೇ ಇಲ್ಲನೇ ಎನ್ನುವುದಕ್ಕೆ ಅವರಿಂದ ರಿಪೋರ್ಟು ಬರುತ್ತಿದೆಯೇ?

ಶ್ರೀ ಎಸ್. ಆರ್. ಕಂಠಿ.—ಏನಾದರೂ ಅನ್ಯಾಯ ನಡೆದಿದ್ದರೆ ಆ ತರಹದ ವಿಚಾರ ಸರಕಾರಕ್ಕೆ ಬರುತ್ತದೆ. ನನಗೆ ಗೊತ್ತಿದ್ದ ಮಟ್ಟಿಗೆ ಯಾವ ತಕರಾರೂ ಬಂದಿಲ್ಲ. D. P. I. ಅಥವಾ D. D. P. I. ಕಡೆಗೇನಾದರೂ ಬಂದಿದ್ದಿರಬಹುದು.

ಶ್ರೀ ಕೆ. ಲಕ್ಕಪ್ಪ.—ಗಣಪತಿ ಹೈನ್ಯೂಲು ಹಾಸ್ಟಲನಲ್ಲಿರತಕ್ಕ ವಿದ್ಯಾರ್ಥಿಗಳಿಗೆ ಅನ್ನ ಹಾಕುತ್ತಿಲ್ಲ ಎಂದು ಅಲ್ಲಿನ ವಿದ್ಯಾರ್ಥಿಗಳಿಂದ ದೂರ ಗಳು ಬಂದಿಲ್ಲವೇ?

Mr. SPEAKER.—Do not make any comments and take up the time of the House by Criticism. Put the interpellation. Instead, the Hon'ble Member says something by way of criticism and then puts a supplementary. Please put a question directly.

ಶ್ರೀ ಕೆ. ಲಕ್ಕಪ್ಪ.—ಈ ಹಾಸ್ಟಲ್ಲಿನ ಮ್ಯಾನೇಜುಮೆಂಟಿನವರು ಹಣವನ್ನು ದುರುಪಯೋಗ ಪಡಿಸಿಕೊಂಡು ಹಾಸ್ಟಲನಲ್ಲಿರುವ ವಿದ್ಯಾರ್ಥಿಗಳಿಗೆ ಅನ್ನವನ್ನು ಕೂಡ ಹಾಕುತ್ತಿಲ್ಲ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ; ಇಲ್ಲದಿದ್ದರೆ ಆ ರೀತಿ ದೂರನ್ನು ತಂದರೆ ಸರಕಾರ ಏನುಕ್ರಮ ತೆಗೆದುಕೊಳ್ಳುತ್ತದೆ?

ಶ್ರೀ ಎಸ್. ಆರ್. ಕಂಠಿ.—ನನ್ನ ಗಮನಕ್ಕೆ ಬಂದಿಲ್ಲ. D. P. I. or D. D. P. I. ಅವರ ಕಡೆಗೆ ಬಂದಿರಬಹುದು, ಅದನ್ನು ನೋಡಿಸುತ್ತೇನೆ.

ಶ್ರೀ ಬಿ. ಕೆ. ಪುಟ್ಟಯ್ಯ.—ಆದಷ್ಟೂ ಸಂಸ್ಥಾನದಲ್ಲಿರುವ ಜನದ ಅಭಿಪ್ರಾಯಕ್ಕೆ ಪ್ರಜಾ ಸರಕಾರ ಬೆಲೆ ಕೊಡುವುದು ಯುಕ್ತವಲ್ಲವೇ?

ಶ್ರೀ ಎಸ್. ಆರ್. ಕಂಠಿ.—ತತ್ವವನ್ನು ನಾನು ಸಂತೋಷದಿಂದ ಒಪ್ಪುತ್ತೇನೆ.

ಶ್ರೀ ಸಿ. ಜೆ. ಮುಕ್ಕಣಪ್ಪ.—ನಾಗವಲ್ಲಿ ಹಾಸ್ಟಲನಲ್ಲಿನ ವಿಷಯದಲ್ಲಿ ಮಿಸ್‌ಅಪ್ರೋಪ್ರಿಯೇಷನ್ನು ಆಗಿದೆ ಎಂದು 1958–1959ರಲ್ಲಿ 59-60ರ ಸಾಲಿನಲ್ಲಿ ರಿಪೋರ್ಟು ಬಂದು D.P I. ಯವರು ಎನ್‌ಕ್ವೈರಿ ಮಾಡಿದ ರಿಪೋರ್ಟು ಇದೆ. ಇದನ್ನು ಈ ಸಭೆಯ ಮುಂದೆ ಇಡುವುದಕ್ಕೆ ಬರುತ್ತದೆಯೇ?

ಶ್ರೀ ಎಸ್. ಆರ್. ಕಂಠಿ.—ಈ ವಿಚಾರ ತಮಗೇ ಗೊತ್ತು. ಬೇಕಾದರೆ ರಿಪೋರ್ಟನ್ನು ಇಡಲು ಅಧ್ಯಕ್ಷರು ಅಪ್ಪಣೆ ಕೊಟ್ಟರೆ ಇಡುತ್ತೇನೆ.

Starting of a High School in the Mining Area of Kolar Gold Fields

*Q.—153. Sri B. P. KADAM (Karwar) [on behalf of SRI S. RAJAGOPAL (K.G.F.)].—

Will the Government be pleasd to state:—

(*a*) whether there is any High School in Mining area of Kolar Gold Fields;

(*b*) the number of High School age group students in the Mining area;

(*c*) whether they are aware of the need for a High School in the Mining area;